# ಬುದ್ಧಚಿಂತನೆ: ಅಹಿಂಸೆ

**ಅರುಣ್ ಕುಮಾರ್ ಎ.ವೈ.[1] & ಶಿವಕುಮಾರ ಡಿ.ಸಿ.[2]**

[1]ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಪಿ.ಎನ್.ಸಿ. ಕಾಗ್ನೀಷಿಯೋ ಪದವಿ ಕಾಲೇಜು, ಬೆಂಗಳೂರು.

[2]ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೈನ್ ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.15795543

## ABSTRACT:

ಜಗತ್ತಿನ ಮಾನವತಾ ಸಾಕಾರಮೂರ್ತಿಗಳಲ್ಲಿ ಬುದ್ಧನು ಮುಖ್ಯನಾದವನು. ಆತನ ವಿಚಾರಧಾರೆಗಳನ್ನು ಚರ್ಚಿಸುವಾಗ ಮಾನವೀಯ ಮೌಲ್ಯಗಳನ್ನು ಬಿತ್ತರಿಸುವಲ್ಲಿ ಮುಖ್ಯವಾದದ್ದಾಗಿದೆ. ಈ ಹಿನ್ನೆಲೆಯಲ್ಲಿ ಬುದ್ಧನ ವಿಚಾರಧಾರೆಗಳು ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ವ್ಯಾಪಿಸಿರುವುದು ಕಾಣಬಹುದಾಗಿದೆ. ಹೀಗಾಗಿ ಭೇದಭಾವ, ಅಸಮಾನತೆ, ಅನ್ಯಾಯ, ಹಿಂಸಾಚಾರ ಇವುಗಳಿಗೆ ವಿರುದ್ಧವಾಗಿ ಬುದ್ಧನ ವಿಚಾರಧಾರೆಗಳು ಮಾನವೀಯ ಅಂಶಗಳನ್ನು ಪ್ರಧಾನವಾಗಿರಿಸಿದೆ. ಸಮಾನತೆ, ಭ್ರಾತೃತ್ವ, ಸೌಹಾರ್ದತೆ, ಸ್ವಾತಂತ್ರ್ಯ ಈ ಅಂಶಗಳನ್ನು ಬುದ್ಧನ ನಿಲುವುಗಳು ಮಾನವ ಸಮಾಜಕ್ಕೆ ನೀಡಿದೆ ಎಂಬುದನ್ನು ಇಲ್ಲಿ ಅರ್ಥೈಸಬಹುದಾಗಿದೆ. ಶತಶತಮಾನಗಳಿಂದಲೂ ಉಳ್ಳವರು ಮತ್ತು ಇಲ್ಲದವರ ನಡುವಿನ ವ್ಯತ್ಯಾಸವನ್ನು ಕಾಣುವಾಗ ಇಲ್ಲದವರ ಮೇಲೆ ನಡೆದ ದೌರ್ಜನ್ಯ ಹಾಗೂ ದಬ್ಬಾಳಿಕೆಯನ್ನು ಬುದ್ಧನ ವಿಚಾರಧಾರೆಗಳು ಆರೋಗ್ಯಕರವಾಗಿಯೇ ಸವಾಲೆಸೆಗಿದೆ.

ಪ್ರಸ್ತುತ ಈ ಲೇಖನವು ಗೌತಮ ಬುದ್ಧನು ಜಗತ್ತಿಗೆ ತೋರ್ಪಡಿಸಿದ ಅಹಿಂಸಾ ಚಿಂತನೆಯನ್ನು ಇಲ್ಲಿ ಮುಖ್ಯವಾಗಿರಿಸಿಕೊಂಡು ಚರ್ಚಿಸಲಾಗಿದ್ದು, ಹಿಂಸೆ ಮತ್ತು ಅಹಿಂಸಾ ಪ್ರವೃತ್ತಿಗಳನ್ನು ತಿಳಿಯಪಡಿಸುವ ಮೂಲಕ ಸಕಲ ಜೀವರಾಶಿಗಳಲ್ಲೂ ಅಹಿಂಸೆಯೇ ಪ್ರಧಾನವಾಗಿರುವುದನ್ನು ಇಲ್ಲಿ ತಿಳಿಯಬಹುದಾಗಿದೆ. ಹೀಗಾಗಿ ಬುದ್ಧನ ಚಿಂತನೆಗಳಲ್ಲೊಂದಾದ ಅಹಿಂಸೆ'ಯನ್ನು ಸೂಕ್ಷ್ಮವಾಗಿ ಗ್ರಹಿಸುವ ಮೂಲಕ ಬುದ್ಧನ ಅಹಿಂಸೆಯಾವುದೆಂದು ಅರಿಯುವುದು ಇಲ್ಲಿನ ಲೇಖನದಲ್ಲಿ ಕಾಣಬಹುದಾಗಿದೆ.ಬುದ್ಧಚಿಂತನೆ' ಎನ್ನುವುದು ಒಂದು ಅರಿವು, ಎಚ್ಚರ ಹಾಗೂ ಮಾನವೀಯ ಪರವಾದದ್ದು ಎಂಬುದನ್ನು ಇಲ್ಲಿ ತಿಳಿಯಬಹುದು.

## KEYWORDS:

ಬುದ್ಧ, ಚಿಂತನೆ, ಹಿಂಸೆ, ಅಹಿಂಸೆ, ಮಾನವತಾವಾದಿ, ಮಾನವೀಯ ಮೌಲ್ಯ, ಪರಂಪರೆ.

**ಪೀಠಿಕೆ:**

ಮಾನವನ ಗುಣಗಳನ್ನು ತಿಳಿಯುವಾಗ ಆಸೆ, ದುರಾಸೆ, ಆಕಾಂಕ್ಷೆ, ಪ್ರೀತಿ, ಅಹಂಕಾರ, ದ್ವೇಷ, ಅಸೂಯೆ, ಮೋಸ, ಸುಳ್ಳು, ಇವೆಲ್ಲವೂ ಆತನಲ್ಲಿ ಸಹಜವಾಗಿಯೇ ಹುಟ್ಟುತ್ತವೆ. ಹಾಗಾಗಿ ಮಾನವನಲ್ಲಿ ಒಳ್ಳೆಯ ಆಲೋಚನೆಗಳು ಹುಟ್ಟುತ್ತವೆ, ಕೆಟ್ಟ ಆಲೋಚನೆಗಳು ಹುಟ್ಟುತ್ತವೆ. ಈ ಮೂಲಕ ಹಿಂಸೆಯ ಗುಣವು ಆತನಲ್ಲಿ ಸಹಜವಾಗಿಯೇ ಹುಟ್ಟುತ್ತದೆ. ಅನಾದಿಕಾಲದಿಂದಿಡಿದು ವರ್ತಮಾನದ ವರೆಗೂ ಮಾನವನು ಒಂದಲ್ಲ ಒಂದು ಕಾರಣಕ್ಕೆ ಹಿಂಸಾ ಪ್ರವೃತ್ತಿಯನ್ನು ತನ್ನಲ್ಲಿ ಒಂದು ಭಾಗವಾಗಿಯೇ ಬೆಳೆಸಿಕೊಂಡು ಬಂದಿದ್ದಾನೆ. ಹಿಂಸೆ ಎನ್ನುವುದು ಸದಾ ನಾಶವನ್ನು ಬಯಸುತ್ತದೆಂಬ ಎಚ್ಚರಿಕೆಯನ್ನು ಮರೆತಿದ್ದಾನೆ. ಹೀಗಾಗಿಯೇ ಅವನು ಹಿಂಸಾವೃತ್ತಿಯ ಜೊತೆಗೆ ಅವನು ಅಹಿಂಸಾ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಸೆಣಸಾಡುತ್ತಿದ್ದಾನೆ.

ಮಹಾವೀರನು ಹಿಂಸೆ ಹಾಗೂ ಅಹಿಂಸೆಯನ್ನು ಕುರಿತು ಈ ರೀತಿ ವ್ಯಾಖ್ಯಾನಿಸಿದ್ದಾನೆ. "ಹಿಂಸೆಯನ್ನು ತ್ಯಜಿಸಲಾಗದಿದ್ದರೂ ತಿಳಿದೂ ತಿಳಿದೂ ಪ್ರಾಣಿಹಿಂಸೆಯನ್ನು ಮಾಡಬೇಡಿ"[1] ಎಂದು ಹೇಳಿದ್ದಾನೆ. ಅಂದರೆ ಮಹಾವೀರರ ಈ ಮಾತುಗಳಲ್ಲಿ ಹಿಂಸೆ ಎನ್ನುವುದು ಮಾನವನ ಜಗತ್ತಿಗೆ ಹೆಚ್ಚು ಅಪಾಯಕಾರಿ ಹಾಗೂ ಹಾನಿಕಾರಕವಾದದ್ದು ಎಂಬುದನ್ನು ಇಲ್ಲಿನ ವ್ಯಾಖ್ಯಾನವು ತಿಳಿಯಪಡಿಸುತ್ತದೆ. ಇನ್ನೂ ಅಹಿಂಸೆಯ ಕುರಿತ ಚಿಂತನೆಯನ್ನು ಗಮನಿಸಿದಂತೆ ಬುದ್ಧನಿಂದಿಡಿದು ಹೊಸ ಕಾಲಮಾನದವರೆಗೂ ಚರ್ಚಿತವಾಗುತ್ತಿರುವ ವಿಷಯವಾಗಿದೆ. ಈ ಮೂಲಕ ಭಾರತೀಯ ಧರ್ಮಗಳಲ್ಲಿ ಬುದ್ಧ, ಬಸವಣ್ಣರಂತೆ ತಮ್ಮ ಬದುಕಿನ ನಡೆ ನುಡಿಗಳಲ್ಲಿ ಅಹಿಂಸೆಯನ್ನು ಪ್ರತಿಪಾದಿಸಿದವರಲ್ಲಿ ಗಾಂಧೀಜಿ ಮುಖ್ಯರಾಗಿದ್ದಾರೆ. ಗಾಂಧೀಜಿಯವರು ಸತ್ಯ, ಶಾಂತಿ, ಅಹಿಂಸೆ[2] ಮೊದಲಾದ ಅಂಶಗಳಿಗೆ ಹೆಚ್ಚು ಒತ್ತನ್ನು ನೀಡಿದವರೆಂದೇ ಅರಿಯಬಹುದಾಗಿದೆ.

ಮುಂದುವರಿದಂತೆ ಮಾನವನು ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಲಾಗದ ಹಂತಕ್ಕೆ ತಲುಪಿದಾಗ ದ್ವೇಷವನ್ನೋ ಅಥವಾ ಹಿಂಸೆಯ ಹಾದಿಯನ್ನೋ ಹಿಡಿಯುತ್ತಾನೆ. ಆ ಹಂತದಲ್ಲಿ ಯಾವುದಾದರೊಂದು ತೊಂದರೆಯನ್ನು ಉಂಟುಮಾಡುತ್ತಾನೆ. ಈ ಹಿನ್ನೆಲೆಯಲ್ಲಿ ಯುದ್ಧಭೀತಿ, ಆಕ್ರಮಣಕಾರಿ ಮನೋವೃತ್ತಿಯ ಸಂದರ್ಭಕ್ಕೆ, ಒಂದಲ್ಲ ಒಂದು ಕಾರಣಕ್ಕೆ ಮಾನವನಲ್ಲಿ ಭಯದ ವಾತಾವರಣ ನೆಲೆಗೊಂಡಿದೆ. ಇದು ಮಾನವನ ಜೊತೆಗೆ ಸಕಲ ಜೀವರಾಶಿಗಳನ್ನೂ ತಲ್ಲಣಗೊಳಿಸುವ ವಿಷಯವಾಗಿದೆ. ಹೀಗೆ ಮಾನವನು ತನಗೊದಗಿದ ಸಂಕಟವನ್ನೋ, ಅಥವಾ ಭಯದ ಪರಿಸರದಿಂದ ಪಾರಾಗಲು ದಾರಿ ಹುಡುಕುತ್ತಾನೆ. ಅದು ಹಿಂಸೆಯ

ಕಡೆಯಿಂದ ಅಹಿಂಸೆಯ ಮಾರ್ಗದೆಡೆಗೆ ಸಾಗಲು ಬಯಸುತ್ತಾನೆ.

ಸಮಸ್ತ ಜೀವಬಿಂದುವಿನಲ್ಲಿ ಕಾಣುವ ದಯೆ, ಕರುಣೆಯೂ ಸಹ ಅಹಿಂಸೆಯೇ ಆಗಿರುತ್ತದೆ. ಹೀಗಾಗಿ ಅಹಿಂಸೆಯ ಕುರಿತು ಸಾಮಾನ್ಯವಾದ ವ್ಯಾಖ್ಯಾನವೊಂದನ್ನು ನೀಡುವುದಾದರೆ"ಯಾವೊಂದು ಜೀವಿಗೂ, ಮಾನಸಿಕವಾಗಿಯೂ, ದೈಹಿಕವಾಗಿಯೋ, ನೋವುಂಟು ಮಾಡದಿರುವುದೇ ಅಹಿಂಸೆ" ಎಂಬುದು ನನ್ನ ಅಭಿಪ್ರಾಯವಾಗಿದೆ. ಜಾಗತೀಕರಣದ ಈ ಸಂದರ್ಭದಲ್ಲಿ 'ಅಹಿಂಸೆ' ಎಂಬ ಪರಿಕಲ್ಪನೆಯೂ ಬಹು ವಿಶಾಲವಾದದ್ದು ಮತ್ತು ಅರ್ಥಗರ್ಭಿತವಾದದ್ದಾಗಿದೆ.

ಬುದ್ಧ, ಯೇಸು, ಮಹಾವೀರ, ಬಸವಣ್ಣ, ಮಹಾತ್ಮಗಾಂಧೀಜಿ, ಮುಂತಾದ ಚಿಂತಕರು ಅಹಿಂಸೆಯ ಕುರಿತಾದ ಮಹತ್ವವನ್ನು ತಮ್ಮ ಚಿಂತನಾ ನುಡಿಗಳಲ್ಲಿ ಸಮಾಜದ ಮುಂದಿರಿಸಿದ್ದಾರೆ. ಈ ಚಿಂತನೆಯೂ ವರ್ತಮಾನದ ಈ ಕಾಲಮಾನದಲ್ಲಿ ಸ್ಪಂದಿಸುವ ರೀತಿಯೂ ವಿಶಿಷ್ಟಪೂರ್ಣವಾಗಿದೆ. ಹಿಂಸೆ ಮತ್ತು ಅಹಿಂಸೆ ಎರಡೂ ಸ್ವಭಾವತಃ ವೃತ್ತಿಗಳು ಒಂದು ನಾಶವನ್ನು ಬಯಸಿದರೆ ಮತ್ತೊಂದು ಜೀವದಯೆಯನ್ನು ಬಯಸುತ್ತದೆ. ಅದ್ಯಾಗೂ ಪೂರ್ವದಿಂದಿಡಿದು ಪಶ್ಚಿಮ ಭಾಗದವರೆಗೂ ಹಿಂಸೆ ಮತ್ತು ಅಹಿಂಸಾವಾದದ ತಿಕ್ಕಾಟಗಳು ನಡೆಯುತ್ತಿದೆ. ಈ ಮುಖೇನ 'ಅಹಿಂಸೆ' ಎನ್ನುವುದು ಮತ್ತೊಂದು ಜೀವರಾಶಿಗೆ ಹಿಂಸೆಯನ್ನು ಕೊಡದಿರುವುದು ಎಂಬುದನ್ನು ಕನ್ನಡ ನಿಘಂಟಿನ ವ್ಯಾಖ್ಯಾನವು ಇಲ್ಲಿನ ಲೇಖನದ ಅಧ್ಯಯನಕ್ಕೆ ಪೂರಕವಾಗಿದೆ.[3]

**ವಿವರಣೆ:** ಭಾರತದ ಚರಿತ್ರೆಯಲ್ಲಿ ಜೈನಧರ್ಮದಿಂದಿಡಿದು ಬೌದ್ಧ ಧರ್ಮದ ವರೆಗೂ ಅಹಿಂಸೆಯ ಬಗೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿರುವುದು ಕಾಣಬಹುದಾಗಿದೆ. ಈ ಮೂಲಕ ಬೌದ್ಧಧರ್ಮದ ಸ್ಥಾಪಕನಾದ ಗೌತಮ ಬುದ್ಧನು ಅಹಿಂಸೆಯಿಂದಲೇ ಹಿಂಸೆಯನ್ನು ಗೆಲ್ಲಬೇಕೆಂದು ಪ್ರತಿಪಾದಿಸಿದ್ದಾನೆ'. ಹೀಗಾಗಿ ಬುದ್ಧನ ಈ ಮೇಲಿನ ವ್ಯಾಖ್ಯಾನವನ್ನು ಗಮನಿಸಿದಂತೆ ಅಂಗುಲಿಮಾಲನ ಮನಃ ಪರಿವರ್ತನೆ ಇಲ್ಲಿ ಹೋಲಿಕೆ ಮಾಡಬಹುದಾಗಿದೆ. ರಕ್ಕಸನಾದ ಅಂಗುಲಿಮಾಲನು ಹಿಂಸೆಯ ಪ್ರತಿಬಿಂಬವಾಗಿದ್ದನು, ಅನೇಕ ಮಾನವರನ್ನು ಕೊಂದು ಅವರ ಹೆಬ್ಬೆರಳುಗಳನ್ನೇ ಮಾಲೆಯಾಗಿ ಧರಿಸಿದ್ದನು. ಇಂತಹ ನರಹಂತಕನಾದ ಅಂಗುಲಿಮಾಲನನ್ನು ತನ್ನ ಅರಿವಿನ ನುಡಿಗಳ ಮೂಲಕ ಬೌದ್ಧಬಿಕ್ಕುವನ್ನಾಗಿಸಿದ ಪ್ರಸಂಗವು ಬುದ್ಧನಅಹಿಂಸಾ' ಸಿದ್ಧಾಂತದ ಮುಖ್ಯ ಅಂಶವಾಗಿದೆ. ಹೀಗೆ ಭೀಕರತೆಯ ರೂಪವಾದ ಅಂಗುಲಿಮಾಲನಿಗೆ ಅಹಿಂಸೆಯ ಸಾಕಾರಮೂರ್ತಿಯಾದ ಬುದ್ಧನ ನಿಲುವು ಅಹಿಂಸಾ ಚಿಂತನೆಯನ್ನು ಜಗತ್ತಿಗೆ ಸಾರಿದೆ ಎಂಬುದನ್ನು ತಿಳಿಯಬಹುದಾಗಿದೆ.

ಮುಂದುವರಿದಂತೆ ಬುದ್ಧನ ಅಹಿಂಸಾ ಸಿದ್ಧಾಂತವನ್ನು ಕುರಿತಂತೆ ದೀರ್ಘವಾದ ಚರ್ಚೆಗೆ ತೊಡಗಿದರೆ, ಬುದ್ಧನ ಬದುಕಿನ ಗಾಥೆಗಳು ವಿವರವಾದ

ಮಾಹಿತಿಗಳನ್ನು ನೀಡುತ್ತವೆ. ಇದಕ್ಕೆ ಮುಖ್ಯವಾಗಿ ಬುದ್ಧನು ತಾನೊಬ್ಬ ರಾಜಕುಮಾರನಾದರೂ ಯುದ್ಧವನ್ನು ನಿರಾಕರಿಸುವುದು, ಅರಮನೆಯ ಸುಖವನ್ನು ತ್ಯಜಿಸುವುದರ ಮೂಲಕ ತಾನೊಬ್ಬ ಮಾನವ, ಇತರ ಜೀವಿಗಳಂತೆ ನಾನು ಒಂದು ಜೀವಿ ಎಂಬುದನ್ನು ಮನಗಂಡು ದಬ್ಬಾಳಿಕೆ, ದೌರ್ಜನ್ಯ, ಶೋಷಣೆ, ಮುಂತಾದ ಹಿಂಸಾತ್ಮಕ ಕೃತ್ಯಗಳನ್ನು ವಿರೋಧಿಸುವ ಮುಖೇನ ಗೌತಮನು ಅಹಿಂಸಾ ವೃತ್ತಿಯನ್ನು ಮೈಗೂಡಿಸಿಕೊಂಡಿರುವುದನ್ನು ಈ ಹಿನ್ನೆಲೆಯೊಳಗೆ ತಿಳಿಯುವುದು ಇಲ್ಲಿನ ಬಹುಮುಖ್ಯ ಅಂಶ.

ಇನ್ನೂ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಾವ್ಯ, ನಾಟಕ, ಕಥೆ, ಕಾದಂಬರಿ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಬುದ್ಧನ ಅಹಿಂಸಾ ಚಿಂತನೆಯನ್ನು ಕುರಿತಂತೆ ಚರ್ಚೆಗಳು ನಡೆಯುತ್ತಲೇ ಇವೆ. ಇವರೆಗೂ ಜಾಗತೀಕರಣದ ಈ ಸಂದರ್ಭದಲ್ಲಿ ಅಹಿಂಸಾ' ಚಿಂತನೆಯನ್ನು ಕುರಿತಂತೆ ಪ್ರಸ್ತುತತೆಯನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದೊಳಗೆ ಬುದ್ಧನ ಕುರಿತಂತೆ ಕನ್ನಡ ಕವಿಗಳು ಗೀತೆಗಳನ್ನು ರಚಿಸುವ ಮೂಲಕ ಬುದ್ಧನ ಚಿಂತನೆಗಳನ್ನು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹರಡಿದರು. ಈ ಮುಖೇನ ಬೇಂದ್ರೆ ಕವಿಯಶ್ರೀ ಬುದ್ಧದೇವನ ದುಃಖ' ಎಂಬ ಗೀತೆಯಲ್ಲಿ ಬುದ್ಧನು ತನ್ನ ಧ್ಯಾನದಿಂದ ಕಂಡುಕೊಂಡ ಸತ್ಯದ ಅಂಶಗಳನ್ನು ಈ ಗೀತೆಯೂ ಸಾರುತ್ತದೆ. ಮುಂದುವರಿದಂತೆ ಬೇಂದ್ರೆಯವರ ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ' ಎಂಬ ಕಾವ್ಯವೂ ಬುದ್ಧನ ತ್ಯಾಗದ ಅಂಶವನ್ನು ಚಿತ್ರಿಸುವ ಮೂಲಕ ಬುದ್ಧನು ತ್ಯಾಗಮೂರ್ತಿ ಎಂದು ಹೇಳುತ್ತದೆ. ಇನ್ನೂ ಅನುವಾದ ಸಾಹಿತ್ಯದಲ್ಲಿ ಗಮನಿಸಿದಂತೆ ಡಾ. ಪ್ರಭುಶಂಕರರು ಅನುವಾದಿಸಿದಕರುಣಾ ಗಂಗೆ'[4] ಎಂಬ ಕಾದಂಬರಿಯೂ ಬುದ್ಧನ ಬದುಕಿನ ಪ್ರಮುಖ ಘಟ್ಟವಾದ ಅಂಗುಲೀಮಾಲನ ಮುಖಾಮುಖಿ ಹಾಗೂ ಅಂಗುಲೀಮಾಲನ ಮನಃ ಪರಿವರ್ತನೆಯನ್ನು ಈ ಕೃತಿಯೂ ಪ್ರತಿನಿಧಿಸುತ್ತದೆ.

ಜರ್ಮನಿಯ ಲೇಖಕ ಎಡ್ವರ್ಡ್ ಥಾಮ್ಸ್ ರವರ ಬುದ್ಧನ ಕುರಿತಾದ ಕೃತಿಯೊಂದನ್ನು ಬಿ.ಎಸ್ ರಾಮಾಸ್ವಾಮಿ ಎಂಬ ಕಾದಂಬರಿಕಾರರು ಸಿದ್ಧಾರ್ಥ' ಎಂಬ ಹೆಸರಿನಿಂದಲೇ ಅನುವಾದಿಸಿದ್ದಾರೆ. ಇಲ್ಲಿ ಬುದ್ಧನ ಕುರಿತಾದ ಚಿಂತನೆಗಳು ಮನೋಜ್ಞವಾಗಿ ಅಭಿವ್ಯಕ್ತಿಗೊಂಡಿರುವುದನ್ನು ಇಲ್ಲಿನ ಕಾದಂಬರಿಯೂ ಸ್ಪಷ್ಟಪಡಿಸುತ್ತದೆ. ಜಿ.ಪಿ ರಾಜರತ್ನಂ ರವರಬುದ್ಧದೇವ' ಎಂಬ ಕೃತಿಯೂ ಬುದ್ಧನ ಬದುಕಿನ ಅನೇಕ ಘಟ್ಟಗಳನ್ನು ಸಾರುವ ಮೂಲಕ ಚಿಂತನಾಶೀಲವಾದ ಅಂಶಗಳು ಈ ಕೃತಿಯಲ್ಲಿ ವ್ಯಕ್ತಗೊಂಡಿದೆ. ಮರಾಠಿಯಲ್ಲಿ ರಚನೆಗೊಂಡ ಧರ್ಮಾನಂದ ಕೋಸಂಬಿಯವರ 'ಭಗವಾನ್ ಬುದ್ಧ'[5] ಕೃತಿಯನ್ನು ಆದ್ಯ ರಂಗಚಾರ್ಯರು ಕನ್ನಡಕ್ಕೆ ಅನುವಾದಿಸುವ ಮೂಲಕ ಬುದ್ಧನ ಬದುಕು ಹಾಗೂ ಬುದ್ಧನ ಉಪದೇಶಗಳ

ಪ್ರಸ್ತುತತೆಯನ್ನು ಈ ಕೃತಿಯಲ್ಲಿ ಮನಗಾಣಬಹುದು. ಇನ್ನೂ ನಾಟಕ ಪ್ರಕಾರದಲ್ಲಿ ಶಿವರಾಮಕಾರಂತರ ಕಿಸಾಗೋತಮಿ, ಬುದ್ಧೋದಯ, ಬಿ. ಪುಟ್ಟಸ್ವಾಮಿಯವರ ಗೌತಮಬುದ್ಧ, ಹರ್ಡಿಕರ್ ಮಂಜಪ್ಪನವರ ಬುದ್ಧಚರಿತ್ರೆ, ಶ್ರೀನಿವಾಸರ ಯಶೋಧರ, ಮುಂತಾದ ನಾಟಕಗಳು ಬುದ್ಧನ ಮಾನವೀಯ ತತ್ವಗಳನ್ನು ಸಾರುವಲ್ಲಿ ಯಶಸ್ವಿಗೊಂಡಿವೆ.[6]

ಮುಂದುವರಿದಂತೆ ಡಾ. ಎಚ್.ಎಸ್. ಅನುಪಮ ಕಥನ ಕಾವ್ಯವಾದ 'ಬುದ್ಧ ಚರಿತೆ' ಎಂಬ ಕೃತಿಯಲ್ಲಿ ಅಹಿಂಸಾ ತತ್ವವನ್ನು ಕುರಿತಂತೆ ವಿಸ್ತಾರವಾಗಿ ನಿರೂಪಿಸಲಾಗಿದೆ.

**ಯುದ್ಧ ಯಾವ ಸಂಕಟ ಪರಿಹರಿಸೀತು?**
**ಬಿತ್ತೀತು ಮಗದೊಂದು ಯುದ್ಧ ಬೀಜವನ್ನು**
**ಕೊಲುವವನ ಕೊಲೆಗಾರ ಹುಟ್ಟಬಹುದು**
**ಆಕ್ರಮಣದತಿಕ್ರಮವಾಗಬಹುದು**
**ಮನ್ನಿಸಿ, ಅವಸರಿಸದೆ ವಿಚಾರಿಸಿ ತಪ್ಪಿತಸ್ಥರಾರು?**
**ಸುದ್ದಿಯಿದೆ, ತಪ್ಪು ನಮ್ಮವರದೂ ಇದೆಯೆಂದು**
**ಕೋಲ್ಕರನಷ್ಟೆ ದೂರಲು ನಮಗಿದೆಯೆ ಹಕ್ಕು?**[7]

ಪ್ರಸ್ತುತ ಕಾವ್ಯ ಭಾಗವೂ ಯುದ್ಧದ ಭೀಕರತೆಯನ್ನು ನಿರೂಪಿಸಿದೆ. ಯುದ್ಧದಿಂದ ಸಾವು, ನೋವು, ಸಂಕಟ, ದುಃಖ, ಎಲ್ಲವೂ ಒದಗಿಬರುತ್ತದೆ. ಈ ಯುದ್ಧದ ಪರಿಣಾಮವನ್ನು ಬುದ್ಧ ಸುಮಾರು 6ನೇ ಶತಮಾನದಲ್ಲಿ ಅರ್ಥಗರ್ಭಿತವಾಗಿ ಸಮಾಜದ ಮುಂದಿರಿಸಿದ್ದ. ಪ್ರಸ್ತುತ ಕಾವ್ಯವೂ ಅದೇ ಭೀಕರತೆಯನ್ನು ಚರ್ಚಿಸುವ ಮೂಲಕ ಯುದ್ಧ ಯಾವ ಸಂಕಟವನ್ನು ಪರಿಹರಿಸುವುದಿಲ್ಲ ಬದಲಾಗಿ ಸಂಕಟವನ್ನು ನೀಡುತ್ತದೆ. ಯುದ್ಧವೂ ಮತ್ತೊಂದು ಯುದ್ಧವನ್ನು ಬಯಸುವ ಮೂಲಕ ಕೊಲುವವನು ಕೊಲೆಗಾರನಾಗಿ ಹುಟ್ಟುತ್ತಾನೆ ಎಂಬ ಅಂಶವನ್ನು ಬಿತ್ತರಿಸುವ ಮೂಲಕ ಇಲ್ಲಿನ ಕಾವ್ಯವೂ ಯುದ್ಧದ ಹಾನಿಯನ್ನು ನಿರೂಪಿಸುವ ಮುಖೇನ ಅಹಿಂಸೆಯನ್ನು ಬಯಸುವುದನ್ನು ಇಲ್ಲಿನ ಕಾವ್ಯವೂ ಸಾರುತ್ತದೆ.

**ಬಂಧು ಜೀರುಂಡೆ**
**ಅಹಿಂಸೆಯ ಬೋಧಿಸಿದವ ನಮ್ಮ ಬುದ್ಧ**
**ಭಿಕ್ಷೆಯೆಂದು ನೀಡಿದಾಗ ಮಾಂಸ ತಿಂದ**
**ಯುದ್ಧಪಿತ ರಾಜರನು ಶಿಷ್ಯರಾಗಿ ಪಡೆದ**
**ಇದು ಹೇಗೆ? ಗೊಂದಲಗೊಳ್ಳದಿರಲು ಕೇಳು**
**ಸಿಂಹಾ ಸೇನಾಪತಿಯ ಸಂದೇಹ ನಿವಾರಣೆ**[8]

ಅಹಿಂಸೆಯ ತತ್ವಗಳನ್ನು ಅನೇಕ ವಿದ್ವಾಂಸರಿಗೆ, ರಾಜರುಗಳಿಗೆ ತನ್ನ ಮಾರ್ಗದ ಮೂಲಕ ಸಾಕ್ಷಾತ್ಕರಿಸಿದ ಬುದ್ಧ ಎಂಬುದಕ್ಕೆ ಇಲ್ಲಿನ ಕಾವ್ಯವೂ ಮುಖ್ಯ

ನಿದರ್ಶನವಾಗುತ್ತದೆ. ಇಡೀ ಮಾನವ ಕುಲಕ್ಕೆ ಅಹಿಂಸಾ ಚಿಂತನೆಯನ್ನು ಬೋಧಿಸಿದವನು ಬುದ್ಧನೆಂದರೆ ತಪ್ಪಾಗಲಾರದು. ಕಾರಣ ಸಕಲ ಪ್ರಾಣಿಗಳೆಲ್ಲರಲ್ಲೂ ಜೀವ ದಯೆಯನ್ನು ಕಂಡವನೇ ಬುದ್ಧನೆಂದು ತಿಳಿಯಬಹುದು. ರಾಜ ಮಹಾರಾಜರನ್ನೆಲ್ಲರನ್ನು ಶಿಷ್ಯರನ್ನಾಗಿ ಪಡೆದ ಬುದ್ಧ ತನ್ನ ಶಿಷ್ಯರಿಂದಲೇ ಅಹಿಂಸೆಯನ್ನು ಲೋಕಕ್ಕೆ ಸಾರಿದ ಎಂಬುದು ಇಲ್ಲಿ ಸ್ಪಷ್ಟಗೊಂಡಿದೆ.

**ಕಂಬಳಿಹುಳ ಚಿಟ್ಟೆಯಾಗದೆ?**
**ಬದಲಾವಣೆಯೇ ನಿಯಮಲೋಕದಲ್ಲಿ**
**ನೋಡು, ಓ ಅಲ್ಲಿ, ಧ್ಯಾನಸ್ಥ ತರುಣ,**
**ಏಳು ಆನೆಗಳಷ್ಟು ಬಲಶಾಲಿ**
**ಅವನೇ ಅಂಗುಲೀಮಾಲ, ಅಲ್ಲಲ್ಲ**
**ಬೆರಳ ಮಾಲೆಯಿಲ್ಲ ಈಗವನ ಕೊರಳಲಿ**
**ಅವನ ಹೆಸರು ಅಹಿಂಸಕ.**
**ಕಾಣುತಿರುವನೇ ದೀಪದ ಮೂಲೆಯಲ್ಲಿ?**[9]

ಪ್ರಸ್ತುತ ಮೇಲಿನ ಕಾವ್ಯ ಭಾಗವೂ ಬುದ್ಧನ ಚಿಂತನೆಗಳಲ್ಲೊಂದಾದ ಅಹಿಂಸೆಯನ್ನು ಪ್ರತಿಪಾದಿಸಿದೆ. ಸದಾ ರಕ್ತ ಸಿಕ್ತವಾದ ಕೊಲೆಗಳನ್ನೇ ಗೈಯುತ್ತಿದ್ದ ಅಂಗುಲೀಮಾಲನ ಕಿರು ಚಿತ್ರಣವನ್ನು ಇಲ್ಲಿನ ಕಾವ್ಯದಲ್ಲಿ ಕಾಣಬಹುದಾಗಿದೆ. ರಕ್ಕಸನಾದ ಅಂಗುಲೀಮಾಲನು ತನ್ನ ಬದುಕಿನಲ್ಲಿ ಅನೇಕ ಅಸಹಾಯಕರನ್ನ, ಹಸುಳೆಗಳನ್ನ, ಕೊಂದಿದ್ದಾನೆ. ಕೊಲೆಗೈದು ಅದೇ ಮಾನವರ ಹೆಬ್ಬೆರಳುಗಳನ್ನು ತನಗೆ ಮಾಲೆಯಾಗಿ ಧರಿಸಿಕೊಂಡಿದ್ದಾನೆ. ಹಿಂಸೆಯ ಪ್ರತಿರೂಪವೇ ಅಂಗುಲೀಮಾಲನೆಂದರೆ ತಪ್ಪಾಗಲಾರದು. ಇಂತಹ ರಕ್ಕಸನಾದ ಅಂಗುಲೀಮಾಲನ ಮನಃ ಪರಿವರ್ತನೆಯೂ ಬುದ್ಧದೇವನಿಂದ ಆದದ್ದು ಇಲ್ಲಿ ಕಾಣಬಹುದಾಗಿದೆ. ಬುದ್ಧಗುರುವಿನ ಸ್ಪರ್ಶದಿಂದ ರಕ್ಕಸನಾದ ಅಂಗುಲೀಮಾಲ ಮಾನವನಾದನು ಹಾಗೂ ಬೌದ್ಧಬಿಕ್ಕುವಾದ ಪ್ರಸಂಗವನ್ನು ಇಲ್ಲಿನ ಕಾವ್ಯವೂ ಚಿತ್ರಿಸುತ್ತದೆ. ಹೀಗಾಗಿ ಹಿಂಸೆ ಹಾಗೂ ಅಹಿಂಸಾ ಪ್ರವೃತ್ತಿಗಳ ಮುಖಾಮುಖಿಯನ್ನು ಗೋಳಿಸುವ ಮೂಲಕ ಅಹಿಂಸೆಯೇ ಸಕಲ ಜೀವರಾಶಿಗಳಿಗೂ ಮುಖ್ಯವೆಂಬುದನ್ನು ಈ ಮೂಲಕ ಅರ್ಥೈಸಬಹುದಾಗಿದೆ.

ಹೀಗೆ ಕನ್ನಡ ಸಾಹಿತ್ಯ ಪರಂಪರೆಯೊಳಗೆ ಪ್ರಮುಖ ದಾರ್ಶನಿಕರ ದರ್ಶನದಲ್ಲಿ ಬುದ್ಧನ ಚಿಂತನೆಗಳು ಹೆಚ್ಚು ಮೌಲ್ಯವನ್ನು ಪಡೆದುಕೊಂಡಿವೆ. ಹೀಗಾಗಿ ಬುದ್ಧನ ತಾತ್ವಿಕತೆಯಲ್ಲೊಂದಾದ ಅಹಿಂಸಾ ಚಿಂತನೆಯೂ ಬಹುಮುಖ್ಯವಾದದ್ದು ಅದನ್ನು ಈ ಹಿನ್ನೆಲೆಯಲ್ಲಿ ಅದರ ಪ್ರಸ್ತುತತೆ ಮತ್ತು ಚಹರೆಯನ್ನು ಈ ಲೇಖನದ ಹಿನ್ನೆಲೆಯಲ್ಲಿ ಅರ್ಥೈಸಬಹುದಾಗಿದೆ. ಒಟ್ಟಾರೆಯಾಗಿ ಕನ್ನಡದ ಕಥನ ಕಾವ್ಯಗಳನ್ನು ಒಳಗೊಂಡಂತೆ ಬುದ್ಧನ ಅಹಿಂಸಾ ತಾತ್ವಿಕತೆಯ ಅಂಶಗಳನ್ನು ಗಮನಿಸಬಹುದಾಗಿದೆ.

**ಅಹಿಂಸಾ ಚಿಂತನೆಯ ಪ್ರಸ್ತುತತೆ:**

ಅಹಿಂಸಾ ಚಿಂತನೆಯೂ ಎಲ್ಲಾ ಕಾಲಕ್ಕೂ ಪ್ರಸ್ತುತವಾಗುತ್ತಲೇ ಇದೆ. ಹೀಗಾಗಿ ಅಹಿಂಸಾ ಚಿಂತನೆಯ ಪ್ರಸ್ತುತತೆ ಇಂದಿಗೂ ತೀರ ಅಗತ್ಯವಾಗಿದೆ. ಕಾರಣ ಜಾಗತೀಕರಣ ಹಾಗೂ ಖಾಸಗೀಕರಣದ ಸಂದರ್ಭದಲ್ಲಿ ಅಹಿಂಸಾ ಚಿಂತನೆಯೂ ಒಂದಲ್ಲ ಒಂದು ಕಾರಣಕ್ಕೆ ತೀರ ಅಗತ್ಯವಾಗಿದೆ. ಆಧುನಿಕರಣದ ಈ ಸಂದರ್ಭದಲ್ಲಿ ಮಾನವನು ಮೂಢನಂಬಿಕೆಗಳು ಹಾಗೂ ಅಂಧಶ್ರದ್ಧೆಯ ಆಚರಣೆಗಳು ಇವುಗಳನ್ನು ಪಾಲಿಸಿಕೊಂಡು ಪ್ರಾಣಿಹಿಂಸೆ ಹಾಗೂ ಜನಸಾಮಾನ್ಯನ ಮೇಲೆ ಶೋಷಣೆಯನ್ನು ನಡೆಸುತ್ತಾ ಬಂದಿದ್ದಾನೆ. ಹೀಗಾಗಿ ಪ್ರಾಣಿಹಿಂಸೆಯ ಕುರಿತು ಬುದ್ಧನ ನಿಲುವು ಅಂದಿಗೂ ಜೀವಂತವಾಗಿತ್ತು ಅದು ಇಂದಿಗೂ ಪ್ರಸ್ತುತದಲ್ಲಿದೆ. ಹೀಗಾಗಿ ಮಾನವ ಧರ್ಮವೊಂದನ್ನು ಸ್ಥಾಪಿಸಲು ಬುದ್ಧನ ಅಹಿಂಸಾ ಚಿಂತನೆ ತೀರ ಅಗತ್ಯವೆಂಬುದಾಗಿ ಅರಿಯಬೇಕಿದೆ.

ಮುಂದುವರಿದು ಅನಾದಿ ಕಾಲದಿಂದಲೂ ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಅಸಮಾನತೆಗಳು ಕಾಣಬಹುದಾಗಿದ್ದು, ಇದಕ್ಕೆ ಪೂರಕವಾಗಿ ಗೌತಮ ಬುದ್ಧನ ಚಿಂತನೆಗಳು ಸ್ಪಂದಿಸುವಂತಹದ್ದನ್ನು ಕಾಣಬಹುದಾಗಿದೆ. ಹೀಗಾಗಿ 12ನೇ ಶತಮಾನದಲ್ಲಿ ಜೀವಿಸಿದ್ದ ಬಸವಣ್ಣನ ವಚನವೊಂದರಲ್ಲಿ ಬುದ್ಧನ ಅಹಿಂಸಾ ತಾತ್ವಿಕತೆಯನ್ನು ಇಲ್ಲಿ ತಿಳಿಯಬಹುದಾಗಿದೆ.

**ಕಳಬೇಡ**
**ಕೊಲಬೇಡ**
**ಹುಸಿಯ ನುಡಿಯಲು ಬೇಡ**
**ಮುನಿಯ ಬೇಡ**
**ಅನ್ಯರಿಗೆ ಅಸಹ್ಯಪಡಬೇಡ**
**ತನ್ನ ಬಣ್ಣಿಸಬೇಡ**
**ಇದಿರ ಹಳಿಯಲು ಬೇಡ**
**ಇದೇ ಅಂತರಂಗ ಶುದ್ಧಿ**
**ಇದೇ ಬಹಿರಂಗ ಶುದ್ಧಿ**
**ಇದೇ ನಮ್ಮ ಕೂಡಲ ಸಂಗನೊಲಿಸುವ ಪರಿ**[10]

ಈ ಮೇಲಿನ ಬಸವಣ್ಣನ ವಚನವನ್ನು ಗಮನಿಸಿದಂತೆ ಬಸವಣ್ಣನ ವಚನಗಳಲ್ಲೂ ಬುದ್ಧನ ಅಹಿಂಸಾ ಚಿಂತನೆಯ ಪ್ರಸ್ತುತತೆಯನ್ನು ಕಾಣಬಹುದಾಗಿದೆ. ಕಳ್ಳತನವು ಹಿಂಸೆಯೇ, ಕೊಲ್ಲುವುದು ಹಿಂಸೆಯೇ, ಸುಳ್ಳು ಹೇಳುವುದು ಹಿಂಸೆಯೇ, ಇತರರನ್ನು ಕಂಡು ಅಸಹ್ಯ ಪಡುವುದು ಹಿಂಸೆಯೇ, ತನ್ನ ಬಗ್ಗೆ ತಾನೇ ಹೊಗಳಿ ಇತರರನ್ನು ತೆಗಳುವುದು ಹಿಂಸೆಯೇ, ಅಹಿಂಸೆಯನ್ನು ಅರಿತವನು ಹಿಂಸೆಯನ್ನು ನೀಡಲಾರ ಎಂಬುದು ಇಲ್ಲಿನ ವಚನದ ಆಶಯವಾಗಿದೆ. ಒಟ್ಟಾರೆಯಾಗಿ ಗೌತಮ

ಬುದ್ಧನ ಅಹಿಂಸಾ ಚಿಂತನೆಯ ಪ್ರಸ್ತುತತೆಯೂ ಇಲ್ಲಿನ ಮಾಹಿತಿಗಳಿಂದ ತಿಳಿಯಬಹುದಾಗಿದೆ.

**ಉಪಸಂಹಾರ:**

ಬುದ್ಧನು ಎಲ್ಲಾ ಕಾಲಕ್ಕೂ ಪ್ರಸ್ತುತವಾಗುವ ಮಾನವೀಯ ಮೂರ್ತಿ. ಜಗತ್ತಿನ ಮೊದಲ ಸಮಾಜ ಸುಧಾರಕ ಎಂದರೆ ತಪ್ಪಾಗಲಾರದು. ಕಾರಣ ಈ ಅಂಧಕಾರದ ಯುಗದಲ್ಲಿ ಮಾನವತತ್ವವನ್ನು ಎತ್ತಿಹಿಡಿಯುವ ಮತ್ತು ಅದನ್ನು ಜಗತ್ತಿಗೆ ಸಾರಿದ ಮೊದಲ ಮಾನವ. ಹೀಗಾಗಿ ಬುದ್ಧನ ಚಿಂತನೆಗಳು ಎಲ್ಲಾ ಯುಗದ ಮೇಲೂ ಅದು ಪ್ರಭಾವಬೀರಿದೆ. ಇನ್ನೂ ಆಧುನಿಕತೆ ಕಾಲವೂ ಯುದ್ಧ ಭೀತಿಯ ವಾತಾವರಣವನ್ನು ಆವರಿಸಿದ್ದು, ಈ ಯುದ್ಧ ನೀತಿಗಳನ್ನು ಎದುರಿಸುವ ಮೂಲಕ ಸಮ ಸಮಾಜವನ್ನು ಕಟ್ಟುವ ಆಶಯವನ್ನು ಹೊಂದಬೇಕಿದೆ. ಈ ಎಲ್ಲಾ ವಿಚಾರಗಳನ್ನು ಬುದ್ಧನು ತನ್ನ ಕಾಲಮಾನದಲ್ಲೇ ತಿಳಿಸಿದ್ದನು ಹೀಗಾಗಿ ನಿರ್ಭಯವಾದ ಸಮಾಜವೊಂದನ್ನು ಕಟ್ಟುವ ಮೂಲಕ ನಾವೆಲ್ಲರೂ ಮಾನವರೆಂಬುದನ್ನು ಕಂಡುಕೊಳ್ಳಬೇಕಿದೆ.

ಹೀಗಾಗಿ ಬುದ್ಧನ ಎಲ್ಲಾ ಚಿಂತನೆಗಳನ್ನು ಒಳಗೊಂಡಂತೆ ಅದು ನಮ್ಮನ್ನು ಪದೇ ಪದೇ ಮಾನವರು ಎಂಬುದನ್ನೇ ಎಚ್ಚರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಗೌತಮ ಬುದ್ಧನು ಮಾನವ ಧರ್ಮವನ್ನೇ ಎತ್ತಿಹಿಡಿದಿದ್ದು ಕೂಡ. ಈ ಮೂಲಕ ತಂತ್ರಜ್ಞಾನ ಅಭಿವೃದ್ಧಿಗೊಂಡ ಈ ಕಾಲದಲ್ಲಿ ಮನುಷ್ಯ ಮನುಷ್ಯನನ್ನೇ ಕೊಲ್ಲುವ ಹಾಗೂ ಯುದ್ಧ ಸಾರುವ ಈ ಸಂದರ್ಭಕ್ಕೆ ಶಾಂತಿಯುತವಾದ ಜಗತ್ತನ್ನು ಸೃಷ್ಟಿಸುವ ಅನಿವಾರ್ಯತೆಯಿದೆ. ಅದಕ್ಕಾಗಿ ಬುದ್ಧನ ಅಹಿಂಸಾ ಚಿಂತನೆಯೂ ಬಹುಮುಖ್ಯವಾದದ್ದು ಎಂಬುದನ್ನು ಮನಗಾಣಲಾಗಿದೆ. ಪ್ರಸ್ತುತ ಈ ಲೇಖನವು ಬುದ್ಧನ ಅಹಿಂಸಾ ಚಿಂತನೆಯನ್ನು ಪ್ರತಿಪಾದಿಸುವ ಮೂಲಕ ಅದರ ಪ್ರಸ್ತುತತೆಯನ್ನು ಚರ್ಚೆಗೆ ಒಳಪಡಿಸಲಾಗಿದೆ.

**ಕೊನೆ ಟಿಪ್ಪಣಿಗಳು:**

1. ಶಿವಣ್ಣ ತಿಮ್ಲಾಪುರ, (2022), ಅಹಿಂಸಾ ಮಾರ್ಗ, ಸ್ಟೂಡೆಂಟ್ ಬುಕ್ ಕಂಪನಿ, ಬೆಂಗಳೂರು, ಪು.ಸಂ. 23
2. ಅದೇ, ಪು.ಸಂ. 27
3. ಬುದ್ಧ ಧಮ್ಮ ಸಾಹಿತ್ಯ, ಪ್ರೊ. ಬಿ. ನಂ ಚಂದ್ರಯ್ಯ, ರಚನ ಪ್ರಕಾಶನ ಬೆಂಗಳೂರು, ಪುಟ.ಸ 67 (1ನೇ ಆವೃತ್ತಿ)
4. ಚಂದ್ರಯ್ಯ ಬಿ.ನಂ., (2013), ಬುದ್ಧ ಧಮ್ಮ ಸಾಹಿತ್ಯ, ರಚನ ಪ್ರಕಾಶನ, ಬೆಂಗಳೂರು, ಪು.ಸಂ. 67
5. ಅದೇ, ಪು.ಸಂ. 68
6. ಅದೇ, ಪು.ಸಂ. 69
7. ಅದೇ, ಪು.ಸಂ. 69
8. ಅನುಪಮ ಎಚ್.ಎಸ್., (2020), ಬುದ್ಧಚರಿತೆ (ಕಥನ ಕಾವ್ಯ), ಲಡಾಯಿ ಪ್ರಕಾಶನ, ಗದಗ, ಪು.ಸಂ. 11
9. ಅದೇ, ಪು.ಸಂ. 81
10. ಬಸವರಾಜು ಎಲ್. (ಸಂ), (2013), ಬಸವಣ್ಣನವರ ವಚನಗಳು, ಸ್ಟೂಡೆಂಟ್ ಬುಕ್ ಕಂಪನಿ, ಮೈಸೂರು, ಪು.ಸಂ. 75

**ಪರಾಮರ್ಶನ ಗ್ರಂಥಗಳು:**


1. ಚಂದ್ರಯ್ಯ ಬಿ.ನಂ., (2013), ಬುದ್ಧ ಧಮ್ಮ ಸಾಹಿತ್ಯ, ರಚನ ಪ್ರಕಾಶನ, ಬೆಂಗಳೂರು.
2. ಸಂಗನಾಳಮಠ ಯು.ಎನ್., (2018), ಬುದ್ಧ ಬೆಳಕು, ಶಕ್ತಿ ಪ್ರಕಾಶನ, ಬೆಂಗಳೂರು.
3. ಮುನಿವೆಂಕಟಪ್ಪ ವಿ., (2014), ಮಹಾಮಾನವ ಬುದ್ಧ, ಉದಯರವಿ ಆಫ್ ಸೆಟ್ ಪ್ರಿಂಟರ್ಸ್, ಮೈಸೂರು.
4. ಶಿವಣ್ಣ ತಿಮ್ಲಾಪುರ, (2022), ಅಹಿಂಸಾ ಮಾರ್ಗ, ಸ್ಟೂಡೆಂಟ್ ಬುಕ್ ಕಂಪನಿ, ಬೆಂಗಳೂರು.
5. ಜಗದೀಶಕೊಪ್ಪ ಎನ್., (2022), ಬುದ್ಧ ಮತ್ತು ಆತನ ಧಮ್ಮ, ಪಾಲಿ ಇನ್‌ಸ್ಟಿಟ್ಯೂಟ್, ಬೆಂಗಳೂರು.
6. ಅನುಪಮ ಎಚ್.ಎಸ್., (2020), ಬುದ್ಧಚರಿತೆ (ಕಥನ ಕಾವ್ಯ), ಲಡಾಯಿ ಪ್ರಕಾಶನ, ಗದಗ.
7. ಬಸವರಾಜು ಎಲ್. (ಸಂ), (2013), ಬಸವಣ್ಣನವರ ವಚನಗಳು, ಸ್ಟೂಡೆಂಟ್ ಬುಕ್ ಕಂಪನಿ, ಮೈಸೂರು.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.